

# ಸ್ವೀಟ್ ಟ್ರೈನ್



ಸ್ಟೀಮ್ ಎಂಜಿನ್ ರೈಲಿನ ಮಾಡೆಲ್ ಒಂದು ಪೂರ್ತಿಯಾಗಿ ಸಿಹಿಯೋ ಸಿಹಿ. ಯಾಕೆಂದರೆ ಇದು ತಯಾರಾಗಿದ್ದು ಚಾಕೊಲೇಟ್‌ನಿಂದ. 34 ಮೀಟರ್ ಉದ್ದವಿರುವ ಈ ಸ್ವೀಟ್ ಟ್ರೈನ್ ಈಗ ಗಿನ್ನೆಸ್ ವಿಶ್ವ ದಾಖಲೆಯ ಖ್ಯಾತಿಯನ್ನು ಗಳಿಸಿದೆ. ಈ ಸಿಹಿ ಸಿಹಿ ರೈಲು ಬಂಡಿಯು ಬೆಲ್ಜಿಯಮ್ ದೇಶದ ರಾಜಧಾನಿಯ ಬ್ರುಸೆಲ್ಸ್ ಸೌತ್ ಸ್ಟೇಷನ್‌ನಲ್ಲಿ ಇತ್ತೀಚೆಗೆ ಜರುಗಿದ ಬ್ರುಸೆಲ್ಸ್ ಚಾಕೊಲೇಟ್ ಸಪ್ತಾಹದಲ್ಲಿ ಅನಾವರಣಗೊಂಡಿತು. ಸುಮಾರು 1250 ಕೆ.ಜಿ.ಯಷ್ಟು ಸಕ್ಕರೆ ಬಳಸಿ ಮಾಡಲಾದ ಈ ವಿಶೇಷ ಚಾಕೊಲೇಟ್ ಮಾಡೆಲ್‌ನ ರೂವಾರಿ ಮಾಲ್ವಾದ ಆಂಡ್ರ್ಯೂ ಫರುಗಿಯಾ. 6.5 ಕ್ಯಾಲೊರಿಯನ್ನು ಹೊಂದಿರುವ ಈ ಮಾಸ್ಟರ್ ಪೀಸ್ ಅನ್ನು ತಯಾರಿಸಲು ಈತ 784 ಗಂಟೆಗಳನ್ನು ವ್ಯಯಿಸಿದ್ದಾನಂತೆ. ಈ ಚಾಕೊಲೇಟ್ ಬಂಡಿಯು ಎರಡು ಭಾಗಗಳನ್ನೊಳಗೊಂಡಿದೆ.

ಮೊದಲ ಏಳು ಬೋಗಿಗಳು ಹೊಸ ಬೆಲ್ಜಿಯನ್ ಟ್ರೈನ್ ಬೋಗಿಗಳಂತಿದ್ದರೆ ಉಳಿದ ಬೋಗಿಗಳು ಬಾರ್ ಹಾಗೂ ರೆಸ್ಟೋರೆಂಟ್‌ಗಳನ್ನೊಳಗೊಂಡ ಹಳೆಯ ರೀತಿ ರೈಲುಬೋಗಿಗಳಂತಿವೆ. ಅತೀ ಸೂಕ್ಷ್ಮ ಕುಸುರಿ ಕೆಲಸವನ್ನೊಳಗೊಂಡು ಸಂಪೂರ್ಣವಾಗಿ ಚಾಕೊಲೇಟ್ ನಿಂದಲೇ ತಯಾರಾಗಿರುವ ಈ ಕೂಗಾಡಿಯು ಎಲ್ಲರ ಮನಸ್ಸನ್ನು ಸೆಳೆದು ಹಲವರ ಬಾಯಿಯಲ್ಲಿ ನೀರೂರಿಸಿದೆ. ಪ್ರಪಂಚದಲ್ಲೇ ಅತೀ ಉದ್ದನೆಯ ಚಾಕೊಲೇಟ್ ರಚನೆ ಎಂಬ ಗಿನ್ನೆಸ್ ವಿಶ್ವ ದಾಖಲೆಯು ಈ ರೈಲು ಗಾಡಿಯನ್ನು ಮತ್ತಷ್ಟು ಸಿಹಿಯನ್ನಾಗಿಸಿದೆ.

■ ವಿದ್ಯಾ ವಿ ಹಾಲಭಾವಿ